ಪಿಸಿ ನಂ.93/2025, ಪಿಡಬ್ಲ್ಯೂ: 01

ದಿನಾಂಕ: 23-09-2025

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಸಾಕ್ಷಿಯ ಮುಂದುವರೆದ ಸ್ವ ಪ್ರಮಾಣೀಕೃತ ಹೇಳಿಕೆ:**

ನಾನು ದಿ: 17-05-2025 ರಂದು ಜೈಲಿನಿಂದ ಹೊರ ಬಂದಿರುತ್ತೇನೆ. ಅದೇ ದಿನ ನಾನು ಮತ್ತು ನನ್ನ ತಂಗಿ ಸವಣೂರ ಪೋಲಸ ಠಾಣೆಗೆ ಹೋಗಿ ಪಿರ್ಯಾಧಿಯನ್ನು ನೀಡಲು ತಯಾರಾಗಿದ್ದೇವು, ಆಗ ಊರಿನ ಹಿರಿಯರು ಇದನ್ನು ಇಲ್ಲಿಯೇ ಬಗೆಹರಿಸೋಣ ಎಂದು ತಿಳಿಸಿದರು. ಆದ ಕಾರಣ ನಾವು ಠಾಣೆಗೆ ಹೋಗಿರುವುದಿಲ್ಲ. ಊರಿನ ಹಿರಿಯರಾದ ಶಾಂತವ್ವ ಹಳ್ಳಾಕಾಯಿ, ಹಿರಿಯಪ್ಪ ಹಳ್ಳಾಕಾಯಿ, ಸಂಜೀವ ತಳವಾರ ಮತ್ತು ಮಂಜಪ್ಪ ಗದಿಗಣ್ಣೆನವರ ರವರು ನಮ್ಮ ಮತ್ತು ಆರೋಪಿತರ ನಡುವೆ ರಾಜಿ ಮಾಡಲು ಪ್ರಯತ್ನಿಸಿದ್ದು ಅದು ವಿಫಲವಾಗಿರುತ್ತದೆ. ನಂತರ ನಾವು ಠಾಣೆಗೆ ಹೋಗಿರುವುದಿಲ್ಲ.

ಪಿ ಎಸ್ ಆಯ್ ಸವಣೂರ ಮತ್ತು ಎಸ್ ಪಿ ಹಾವೇರಿ ರವರಿಗೆ ಕಳುಹಿಸಿದ ಪಿರ್ಯಾಧಿಯ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 1 ಮತ್ತು 2 ಎಂದು ಗುರುತಿಸಲಾಯಿತು.

ಎರಡು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 3 ಮತ್ತು 4 ಎಂದು ಗುರುತಿಸಲಾಯಿತು.

ಎರಡು ಅಂಚೆ ಸ್ವೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 5 ಮತ್ತು 6 ಎಂದು ಗುರುತಿಸಲಾಯಿತು.

ಪಿರ್ಯಾಧಿದಾರರ ಮೂಲ ಆಧಾರ ಕಾರ್ಡನೊಂದಿಗೆ ತಾಳೆ ಮಾಡಿ ನೋಡಿ ಅದರ ದೃಢಿಕೃತ ನಕಲವನ್ನು ನಿಪಿ- 7 ಎಂದು ಗುರುತಿಸಲಾಯಿತು.

**ಆರೋಪಿತರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ವಿನಂತಿ ಮಾಡುತ್ತೇನೆ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.